# ಆಸೆ- ನಿರಾಸೆಗಳ ನಡುವೆ!

**ಮಕ್ಕಳ ಹಿತ ಕಾಪಾಡುವುದು, ಅವರ ಅಗತ್ಯಗಳನ್ನು ಪೂರೈಸುವುದು ಮತ್ತು ಉತ್ತಮ ಭವಿಷ್ಯಕ್ಕಾಗಿ ಚಿಂತಿಸುವುದು ಪಾಲಕರ ಕರ್ತವ್ಯ. ಹಾಗೆಂದು ಮಕ್ಕಳ ಎಲ್ಲಾ ಆಸೆಗಳನ್ನು ಸ್ವಂತ ಸುಖ- ಅನುಕೂಲ ತ್ಯಾಗ ಮಾಡಿ ಪೂರೈಸುವ ಅಗತ್ಯ ಖಂಡಿತಾ ಇಲ್ಲ.**

**ಡಾ. ಕೆ.ಎಸ್. ಚೈತ್ರಾ**

'ನನಗೆ ಸಣ್ಣವನಿರುವಾಗ ಚೆನ್ನಾಗಿ ಉಟ್ಟು ತೊಟ್ಟು ಮೆರೆಯಬೇಕೆಂದಿತ್ತು. ಆದರೆ ಬಡತನದಿಂದ ಅದು ಸಾಧ್ಯವಾಗದಿದ್ದಾಗ ಬಹಳ ನಿರಾಸೆಯಾಗಿತ್ತು. ಈಗ ನಮ್ಮ ಮಗುವಿಗೆ ಹಾಗಾಗಬಾರದು. ಎಷ್ಟೇ ಕಷ್ಟವಾದರೂ, ನಾವೊಂದು ತುತ್ತು ಕಡಿಮೆ ತಿಂದರೂ ಪರವಾಗಿಲ್ಲ; ಮಗು ಕೇಳಿದ್ದನ್ನು ಕೊಡಿಸೋಣ'

'ನಮಗೆ ಏನೇ ಕಷ್ಟಗಳು ಬರಲಿ, ಮಕ್ಕಳಿಗೆ ಅದು ಗೊತ್ತಾಗದಂತೆ ಅವರ ಆಸೆಗಳನ್ನು ಪೂರೈಸೋಣ, ಅವರ ಸುಖ ಮುಖ್ಯ. ನಾವು ಅವರಿಗಲ್ಲದೇ ಇನ್ಯಾರಿಗೆ ಮಾಡೋದು?'

ಇದು ಸಾಮಾನ್ಯವಾಗಿ ಮಧ್ಯಮ ವರ್ಗದ ಕುಟುಂಬಗಳ ಪೋಷಕರ ಅಭಿಪ್ರಾಯ. ಮಕ್ಕಳನ್ನು ಚೆನ್ನಾಗಿ ಬೆಳೆಸಬೇಕು. ತಾವು ಪಟ್ಟ ಕಷ್ಟ ಮಕ್ಕಳಿಗೆ ಬರಬಾರದೆಂಬ ಉದ್ದೇಶದಿಂದ ಅವರು ಕೇಳಿದ್ದನ್ನೆಲ್ಲಾ ಕೊಡಿಸುವ 'ತ್ಯಾಗಮಯಿ' ತಂದೆತಾಯಿಯರು ಸಾವಿರಾರು. ಹೊಟ್ಟೆ ಬಟ್ಟೆ ಕಟ್ಟಿ ಲಕ್ಷಾಂತರ ರೂಪಾಯಿ ಸಾಲ ಸೋಲ ಮಾಡಿ ಹೇಗಾದರೂ ಮಕ್ಕಳ ಎಲ್ಲಾ ಆಸೆ ಪೂರೈಸುವ, ನಿರಾಸೆಯ ನೆರಳೂ ಸೋಕದಂತೆ ಕಾಯುವ ಪ್ರಯತ್ನ ಪೋಷಕರದ್ದು. ಆದರಿದು ಸರಿಯೇ?

ಮಕ್ಕಳ ಹಿತ ಕಾಪಾಡುವುದು, ಅವರ ಅಗತ್ಯಗಳನ್ನು ಪೂರೈಸುವುದು ಮತ್ತು ಉತ್ತಮ ಭವಿಷ್ಯಕ್ಕಾಗಿ ಚಿಂತಿಸುವುದು ಪಾಲಕರ ಕರ್ತವ್ಯ. ಹಾಗೆಂದು ಮಕ್ಕಳ ಎಲ್ಲಾ ಆಸೆಗಳನ್ನು ಸ್ವಂತ ಸುಖ ಅನುಕೂಲ ತ್ಯಾಗ ಮಾಡಿ ಪೂರೈಸುವ ಅಗತ್ಯ ಖಂಡಿತಾ ಇಲ್ಲ. ಮಕ್ಕಳ ಮನಸ್ಸು ಚಂಚಲವಾದದ್ದು, ಅವರ ಅರಿವಿನ ಕ್ಷೇತ್ರವೂ ಸೀಮಿತವಾದದ್ದು. ವಾಸ್ತವ ಜಗತ್ತಿನ ಅರಿವು ಅವರಿಗಿರುವುದಿಲ್ಲ. ಹಾಗಾಗಿಯೇ 'ಟಿ.ವಿ.ಯಲ್ಲಿ ಬಂದದ್ದೆಲ್ಲಾ ಕೊಡಿಸು' `ಪಕ್ಕದ ಮನೆ ಹುಡುಗನ ತರದ್ದೇ ಬಟ್ಟೆ ಬೇಕು' `ನಾನೂ ಕಾರಿನಲ್ಲಿ ಓಡಾಡಬೇಕು' ಎಂಬ ಮಕ್ಕಳ ಬೇಡಿಕೆಗಳು ಅತ್ಯಂತ ಸಹಜವಾದದ್ದು. ಆದರೆ ಕುರುಡು ವ್ಯಾಮೋಹಕ್ಕೆ ಬೀಳದೇ ಅವುಗಳ ಬಗ್ಗೆ ನಿರ್ಣಯಿಸುವುದು ಪೋಷಕರ ಜವಾಬ್ದಾರಿ. ಕುಟುಂಬದ ಹಿತಕ್ಕಾಗಿ ಸಣ್ಣ ದೊಡ್ಡ ತ್ಯಾಗಗಳು ಅನಿವಾರ್ಯ. ಆದರೆ ಅದರ ಬೆಲೆ ಮಕ್ಕಳಿಗೆ ತಿಳಿದಿರಬೇಕು. ಆಗ ಮಾತ್ರ ಅದು ವ್ಯರ್ಥವಾಗುವುದಿಲ್ಲ.ಹಾಗೆಯೇ `ತ್ಯಾಗಮಯಿ' ಯಾವಾಗಲೂ ತಂದೆ ತಾಯಿಯರೇ ಆಗಬೇಕೆಂದಿಲ್ಲ ಎಂಬುದರ ಅರಿವು ಮಕ್ಕಳಿಗಿರಬೇಕು.



ಬಾಲ್ಯದಲ್ಲಿ, ತಂದೆತಾಯಿಯರ ವರ್ತನೆ ಮಕ್ಕಳ ವ್ಯಕ್ತಿತ್ವ ಮತ್ತು ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಸಣ್ಣವರಿರುವಾಗಲೇ ನಿಧಾನವಾಗಿ ಮಕ್ಕಳಿಗೆ ವಾಸ್ತವಿಕತೆಯ ಅರಿವು ಮೂಡಿಸಬೇಕು. ಸಮಯಸಂದರ್ಭ ನೋಡದೇ ಸದಾ ತ್ಯಾಗಮಯಿಗಳಾಗಿ ಮಕ್ಕಳನ್ನು ಭ್ರಮಾಲೋಕದಲ್ಲಿ ಇಟ್ಟರೆ ಅದರಿಂದ ಮಕ್ಕಳ ಆಸೆ ಬೇಡಿಕೆಗಳು ತಣಿಯುವುದಿಲ್ಲ. 'ನಾನು ಕೇಳಿದ್ದೆಲ್ಲಾ ಸಿಗುತ್ತದೆ' ಎಂಬ ಮನೋಭಾವ ಬೆಳೆದು ಬಲವಾಗಿ ಬೇರೂರುತ್ತದೆ. ಅಗತ್ಯಗಳು ಮುಗಿದು ಆಸೆ, ದುರಾಸೆಗೆ ತಿರುಗಿ ಕೊನೆ ಇರುವುದೇ ಇಲ್ಲ. `ಯಾರಿಗೆ ಏನಾದರೂ ಸರಿ, ನನ್ನ ಆಸೆ ಮುಖ್ಯ' ಎಂದು ಭಾವಿಸುವ ಮಕ್ಕಳು, ಬೇರೆಯವರ ಭಾವನೆ ಕಷ್ಟ ನಿರ್ಲಕ್ಷಿಸುವಷ್ಟು ಸ್ವಾರ್ಥಿಗಳಾಗುತ್ತಾರೆ. ತಂದೆ ತಾಯಿ ಇರುವುದೇ ತಮಗಾಗಿ, ಕೇಳುವುದು ತಮ್ಮ ಹಕ್ಕು ಎಂಬ ಧೋರಣೆ ಬೆಳೆಸಿಕೊಳ್ಳುತ್ತಾರೆ.

ಈ ರೀತಿ ಮಕ್ಕಳ ಎಲ್ಲಾ ಆಸೆಗಳನ್ನು ಪೂರೈಸಿ ತಾವು ಒಳ್ಳೆಯ ತಂದೆತಾಯಿ ಎಂದು ಸಮಾಧಾನ ಸಿಕ್ಕರೂ ಭವಿಷ್ಯದ ದೃಷ್ಟಿಯಿಂದ ಅದು ಹಾನಿಕಾರಕವೇ! ಮಕ್ಕಳಿಗೆ ಏನನ್ನಾದರೂ ಮಾಡಲು, ಪಡೆಯಲು ಆಸೆಯೇ ಇಲ್ಲವಾಗುತ್ತದೆ. ಬಯಸಿದ್ದೆಲ್ಲಾ ಬಾಯಿಂದ ಹೊರಬಿದ್ದ ಕೂಡಲೇ ತಂದೆ ತಾಯಿ ಬೇರೆಲ್ಲವನ್ನೂ ಬದಿಗಿಟ್ಟು, ತಮಗಾದ ತೊಂದರೆ ಮುಚ್ಚಿಟ್ಟು ಅದನ್ನು ಪೂರೈಸಿದರೆ ಮಕ್ಕಳಿಗೆ ಇನ್ನೇನು ಆಸೆ ಉಳಿದೀತು? ಕಷ್ಟಪಡಲು, ಮಹತ್ತರವಾದುದನ್ನು ಸಾಧಿಸಲು ಪ್ರೇರಣೆಯಾದರೂ ಏನು? ಹಾಗೆಯೇ ಸಿಕ್ಕ ವಸ್ತುಗಳಿಗೆ ಸಂತೋಷ ಪಡುವ ಗುಣವೂ